**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆ ಇಲಾಖೆ**

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59(4) ರನ್ವಯ ಕೆಲವು ಸರಕುಗಳ ಮೇಲೆ ಅನ್ವಯವಾಗುವ ತೆರಿಗೆ ದರದ ಬಗ್ಗೆ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಬಿ.ಆರ್.ಇಂಡಸ್ಟ್ರೀಸ್, ಬಿ–122, 3ನೇ ಕ್ರಾಸ್, 1ನೇ ಹಂತ, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು, ಇವರ ದಿನಾಂಕ 30–01–2015ರ ಅರ್ಜಿ. (ಟಿನ್: 29280067855).

****

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮಡಿಯಲ್ಲಿ ನೋಂದಣಿದಾರರಾದ ಮೆ:ಬಿ.ಆರ್.ಇಂಡಸ್ಟ್ರೀಸ್, ಬಿ–122, 3ನೇ ಕ್ರಾಸ್, 1ನೇ ಹಂತ, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು, ಇವರು ಮೇಲ್ಕಂಡ ಅರ್ಜಿಯಲ್ಲಿ "ಗೋಲ್ಡ್ ಪೊಟಾಷಿಯಮ್ ಸೈನೈಡ್" ಮೇಲೆ ಅನ್ವಯವಾಗುವ ತೆರಿಗೆ ದರದ ಬಗ್ಗೆ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**<u>ಸ್ಪಷ್ಟೀಕರಣ ಆದೇಶ ಸಂಖ್ಯೆ:ಸಿಎಲ್‌ಆರ್/ಸಿಆರ್.153/2014–15, ದಿ. 17–04–2015</u>**

ಸಿಇಟಿ ಕೋಡ್ 2837.20.90ಕ್ಕೆ ಒಳಪಡುವ "ಗೋಲ್ಡ್ ಪೊಟಾಷಿಯಮ್ ಸೈನೈಡ್" ದಿನಾಂಕ 30–04–2005ರ ಅಧಿಸೂಚನೆ ಸಂಖ್ಯೆ:ಎಫ್‌ಡಿ 197 ಸಿಎಸ್‌ಎಲ್ 2005(6)ರ ಕೋಷ್ಟಕದಲ್ಲಿನ ಕ್ರಮ ಸಂಖ್ಯೆ 64(9) ರನ್ವಯ "ಇತರ ಕಾಂಪ್ಲೆಕ್ಸ್ ಸೈನೈಡ್" ಎಂದು ಈ ಕೆಳಕಾಣಿಸಿದ ತೆರಿಗೆ ದರದಂತೆ ಅಧಿಸೂಚಿತ ಕೈಗಾರಿಕಾ ಕಚ್ಚಾವಸ್ತುವೆಂದು ತೆರಿಗೆ ಬಾಧ್ಯತೆಗೊಳಪಡುತ್ತದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ:

| ಅವಧಿ | ತೆರಿಗೆ ದರ |
|---|---|
| ದಿನಾಂಕ 31-03-2011 ರವರೆಗೆ | ಶೇ. 4% |
| ದಿನಾಂಕ 01-04-2011 ರಿಂದ 31-07-2012 ರವರೆಗೆ | ಶೇ. 5% |
| ದಿನಾಂಕ 01-08-2012 ರಿಂದೀಚೆಗೆ | ಶೇ. 5.5% |

(ರಿತ್ವಿಕ್ ಪಾಂಡೆ),
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು